# ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ

## ಸಿ.ಸಿ. ನಂ : 483/2024

ಸಾಕ್ಷಿದಾರರ ಹೆಸರು : ಮಂಜುನಾಥ ಪಿಡಬ್ಲ್ಯು:01
ತಂದೆ / ಗಂಡನ ಹೆಸರು : ಕರಿಯಪ್ಪ ಸಿಡಬ್ಲ್ಯು:01
ವಯಸ್ಸು : 42 ವರ್ಷ
ಉದ್ಯೋಗ : ಕೂಲಿ
ವಾಸಸ್ಥಳ : ಹಾಲೇನಹಳ್ಳಿ ಪ್ರ.ವ.ಬೋ ದಿ.ಃ 24.03.2025

## ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ.ಯವರಿಂದ

ಆರೋಪಿ ಗೊತ್ತು. ಚಾ.ಸಾಃ 2, 3, 9 ಮತ್ತು 10 ಗೊತ್ತು. ಮೃತ ರಮೇಶ @ ರಾಮಾಂಜನೇಯ ಗೊತ್ತು. ಅವರು ಅಫಘಾತದಲ್ಲಿ ಮೃತಪಟ್ಟಿರುತ್ತಾರೆ.

ದಿಃ 25.12.2023 ರಂದು ಸಂಜೆ 5.15 ಗಂಟೆ ಸಮಯದಲ್ಲಿ ಹೆಚ್.ಡಿ ಪುರದಿಂದ ಬರುತ್ತಿದ್ದ ಬೈಕಿಗೆ ಆರೋಪಿ ತನ್ನ ಹೊಲದ ಕಡೆಯಿಂದ ಬೈಕಿನಲ್ಲಿ ಬರುತ್ತಿದ್ದಾಗ ಅತೀವೇಗ ಮತ್ತು ಅಜಾಗರೂಕತೆಯಿಂದ ಬಂದು ಅಫಘಾತ ಪಡಿಸಿರುತ್ತಾನೆ. ಸದರಿ ಅಫಘಾತದಿಂದಾಗಿ ಮೃತ ರಮೇಶ ರವರು ಬೈಕಿನಿಂದ ಕೆಳಗೆ ಬಿದ್ದಿದ್ದರಿಂದ ಅವರ ತಲೆಗೆ, ಕಿವಿಗೆ, ಮೂಗಿಗೆ ರಕ್ತಗಾಯಗಳಾಗಿರುತ್ತವೆ. ಅಫಘಾತವಾದಾಗ ನಾನು ಹೆಚ್.ಡಿ.ಪುರದಿಂದ ಬರುತ್ತಿದ್ದಾಗ ಚಾಸಾಃ9 ರವರು ಫೋನ್ ಮಾಡಿ ಅಫಘಾತದ ವಿಚಾರ ನನಗೆ ತಿಳಿಸಿರುತ್ತಾರೆ.

ನಾನು ಸ್ಥಳಕ್ಕೆ ಬಂದಾಗ ಆರೋಪಿ ಸ್ಥಳದಲ್ಲಿ ಇರಲಿಲ್ಲ. ಸ್ಥಳದಲ್ಲಿ ಕೆಎಃ16ಃಇಎಸ್ಃ2291 ನಂಬರಿನ ಹೀರೋ ಹೊಂಡಾ ಬೈಕ್ ಮತ್ತು ಪಲ್ಸಾರ್ ಬೈಕ್ ಇದ್ದು, ಅದರಲ್ಲಿ ನೊಂದಣಿ ಸಂಖ್ಯೆ ಇರಲಿಲ್ಲ, ಅದು ಹೊಸದಾದ ಬೈಕ್ ಆಗಿತ್ತು. ತದನಂತರ ನಾವು ರಮೇಶ ರವರನ್ನು ಹೆಚ್.ಡಿ.ಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋಗಿ ದಾಖಲಿಸಿದ್ದು, ನಂತರ ದಾವಣಗೆರೆಯ ಎಸ್.ಎಸ್.ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ, ತದನಂತರ ಬೆಂಗಳೂರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಕರೆದುಕೊಂಡು ಹೋಗುತ್ತಿದ್ದಾಗ ಶಿರಾ ಪಟ್ಟಣದ ಬಳಿ ಆತ ಮೃತಪಟ್ಟಿರುತ್ತಾನೆ.

ತದನಂತರ ಮೃತನ ಶವ ತನಿಖೆಯ ಪರೀಕ್ಷೆಯನ್ನು ಮುಗಿಸಿಕೊಂಡು ಶವವನ್ನು ತೆಗೆದುಕೊಂಡು ಹೋಗಿರುತ್ತೇವೆ. ಈ ಬಗ್ಗೆ ನಾನು ದಿಃ 26.12.2023 ರಂದು

ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ. ಸಾಕ್ಷಿಯು ದೂರು ಮತ್ತು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿಃ 1 ಮತ್ತು 1(ಎ) ಎಂದು ಗುರುತಿಸಲಾಯಿತು.

ದಿಃ 27.12.2023 ರಂದು ಪೋಲೀಸರು ಘಟನಾ ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಲು ಬಂದಿದ್ದು, ಸ್ಥಳದಲ್ಲಿ ನಾನು, ಚಾಸಾಃ2 ಮತ್ತು 3 ರವರು ಹಾಜರಿದ್ದು, ನಮ್ಮ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಪೋಟೋಗಳನ್ನು ತೆಗೆಸಿರುತ್ತಾರೆ. ಸಾಕ್ಷಿಯು ಪಂಚನಾಮೆ ಮತ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿಃ2 ಮತ್ತು 2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪಂಚನಾಮೆ ಕಾಲಕ್ಕೆ ತೆಗೆಸಲಾದ ಪೋಟೋಗಳಲ್ಲಿ ತಾನಿರುವುದನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಸಿಡಿಯನ್ನು ಅನುಕ್ರಮವಾಗಿ ನಿಪಿಃ3 ರಿಂದ 5 ಎಂದು ಗುರುತಿಸಲಾಯಿತು. ಮಹಜರ್ ಕ್ರಮವನ್ನು ಬೆಳಿಗ್ಗೆ 9.00 ರಿಂದ 9.30 ರ ವರೆಗೆ ಜರುಗಿಸಿರುತ್ತಾರೆ.

ತದನಂತರ ಸುಮಾರು 2 ತಿಂಗಳುಗಳ ನಂತರ ನನ್ನನ್ನು ಠಾಣೆಗೆ ಕರೆಯಿಸಿ ಠಾಣೆಯಲ್ಲಿದ್ದ ಆರೋಪಿತನನ್ನು ನನಗೆ ತೋರಿಸಿದ್ದು, ಆತನೇ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯಾಗಿರುತ್ತಾನೆ.

ನಾನು ಪೋಲೀಸರ ಮುಂದೆ ಯಾವುದೇ ಮರುಹೇಳಿಕೆ ನೀಡಿರುವುದಿಲ್ಲ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ಮರುಹೇಳಿಕೆಗೆ ಭಾಗಶಃ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು)

**ಪಾಟೀಸವಾಲು : ಮಾನ್ಯ ಎಪಿಪಿಯವರಿಂದ**

ದಿನಾಂಕಃ25.12.2023 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಹೆಚ್.ಡಿ.ಪುರ ಕಡೆಯಿಂದ ಹಾಲೇನಹಳ್ಳಿ ಗ್ರಾಮದ ಕಡೆಗೆ ಮೃತ ರಮೇಶನು ತನ್ನ ಪಲ್ಸಾರ್ ಬೈಕಿನಲ್ಲಿ ಬರುತ್ತಿದ್ದು, ಅದೇ ವೇಳೆಗೆ ಜಮೀನುಗಳ ಕಡೆಯಿಂದ ಬಂಡಿಜಾಡು ರಸ್ತೆಯ ಮೂಲಕ ಆರೋಪಿ ತನ್ನ ಹಿಂಬದಿಯಲ್ಲಿ ಒಬ್ಬರನ್ನು ಕೂರಿಸಿಕೊಂಡು ಬೈಕನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮೃತ ರಮೇಶನ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಎರಡೂ ಬೈಕಿನವರು ಬೈಕ್ ಸಮೇತ ಕೆಳಗೆ ಬಿದ್ದು ಗಾಯಗೊಂಡಿದ್ದು, ತೀವ್ರವಾಗಿ ಗಾಯಗೊಂಡಿದ್ದ ರಮೇಶನು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದರಿಂದ, ದಿಃ 22.02.2025 ರಂದು ಹೊಳಲ್ಕೆರೆ ವೃತ್ತ ನಿರೀಕ್ಷಕರ

ಕಛೇರಿಗೆ ನನ್ನನ್ನು ಕರೆಸಿದ್ದು, ನಾನು ಸದರಿ ಕಛೇರಿಯಲ್ಲಿ ಆರೋಪಿಯನ್ನು ನೋಡಿದ್ದು, ಪ್ರತ್ಯಕ್ಷ ಸಾಕ್ಷಿದಾರರು ಆರೋಪಿಯನ್ನು ಗುರುತಿಸಿ ಆತನೇ ಅಫಘಾತ ಪಡಿಸಿದ್ದು ಎಂದು ತಿಳಿಸಿದ್ದರಿಂದ ನನಗೆ ತಿಳಿಯಿತು ಎಂದು ಈಗ ಓದಿ ಹೇಳಿದಂತೆ ನಾನು ಪೋಲೀಸರ ಮುಂದೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀಸವಾಲು ಆರೋಪಿ ಪರ ಶ್ರೀ ಎಂ.ಪಿ ವಕೀಲರಿಂದಃ</u>**

ಚಾಸಾಃ2 ರಿಂದ 9 ರವರು ನಮ್ಮ ಗ್ರಾಮದವರು ಮತ್ತು ನಮ್ಮ ಸಂಬಂಧಿಕರು ಎಂದರೆ ಸರಿ. ದಿಃ 25.12.2023 ರಂದು ನಾನು ಹೆಚ್.ಡಿ.ಪುರ ಗ್ರಾಮಕ್ಕೆ ಸಂಜೆ ಸುಮಾರು 4.00 ರಿಂದ 4.30 ಗಂಟೆ ಸಮಯದಲ್ಲಿ ಹೋಗಿದ್ದೆ. ಚಾಸಾಃ9 ರವರು ನನಗೆ ಸುಮಾರು 5.15 ಗಂಟೆಗೆ ಫೋನ್ ಮೂಲಕ ಅಫಘಾತದ ವಿಚಾರ ತಿಳಿಸಿರುತ್ತಾರೆ. ಸದರಿ ವಿಚಾರವನ್ನು ನಿಪಿಃ1 ರ ದೂರಿನಲ್ಲಿ ತಿಳಿಸಿರುವುದಿಲ್ಲ. ನಿಪಿಃ1 ನ್ನು ಪೋಲೀಸರು ಬರೆದುಕೊಂಡಿರುತ್ತಾರೆ. ನಿಪಿಃ1 ರ ಸಂಗತಿಗಳು ನನಗೆ ಸಂಪೂರ್ಣವಾಗಿ ಗೊತ್ತಿಲ್ಲ. ಅದಕ್ಕೆ ಪೋಲೀಸರು ಸಹಿ ಮಾಡು ಎಂದು ತಿಳಿಸಿದ್ದರಿಂದ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಮೃತ ರಮೇಶ @ ರಾಮಾಂಜನೇಯ ಚಾಸಾಃ7 ರವರ ಗಂಡ ಎಂದರೆ ಸರಿ. ಅಫಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಅಫಘಾತವು ಹೇಗಾಗಿರುತ್ತದೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲಾ ಎಂದರೆ ಸರಿ.

ಮೃತ ರಮೇಶ @ ರಾಮಾಂಜನೇಯ ರವರಿಗೆ ಬೈಕನ್ನು ಚಾಲನೆ ಮಾಡಲು ಪರವಾನಗಿ ಪತ್ರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಫಘಾತದ ವಿಚಾರವನ್ನು ಚಾಸಾಃ9 ರವರು ತಿಳಿಸಿದ ನಂತರವೇ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಮೃತ ರಮೇಶ @ ರಾಮಾಂಜನೇಯ ನನ್ನ ಸಂಬಂಧಿಯಾಗಿದ್ದರಿಂದ ಅವರ ಕುಟುಂಬಸ್ಥರಿಗೆ ಪರಿಹಾರ ಕೊಡಿಸುವ ದುರುದ್ದೇಶದಿಂದ ಚಾಸಾಃ9 ರವರ ಮಾತು ಕೇಳಿ ಆರೋಪಿಯ ವಿರುದ್ಧ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಫಘಾತವು ಮೃತ ರಮೇಶ @ ರಾಮಾಂಜನೇಯ ತಪ್ಪಿನಿಂದಲೇ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಬಂದಾಗ ಸಂಜೆ 5.15 ಗಂಟೆ ಸಮಯ ಆಗಿತ್ತು. ಮೃತನನ್ನು ಯಾವುದೋ ಒಂದು ಗೂಡ್ಸ ಗಾಡಿ ಬಂದಿದ್ದರಿಂದ, ಅದರಲ್ಲಿ ಹೆಚ್.ಡಿಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ನಾನು ಚಿತ್ರದುರ್ಗ ಸರ್ಕಾರಿ ಆಸ್ಪತ್ರೆಗೆ ಸಂಜೆ 7.00 ಗಂಟೆಗೆ ಹೋಗಿರುತ್ತೇನೆ. ತದನಂತರ ನಾನು ಮೃತನನ್ನು ದಾವಣಗೆರೆ ಆಸ್ಪತ್ರೆಗೆ ಕಳಿಸಿಕೊಟ್ಟು ಮನೆಗೆ ವಾಪಾಸು ಬಂದಿರುತ್ತೇನೆ. ತದನಂತರ ಮೃತನು ಎಲ್ಲಿ ಮತ್ತು ಹೇಗೆ ಮೃತಪಟ್ಟಿರುತ್ತಾನೆ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿ.

ಆರೋಪಿತನ ತಪ್ಪಿನಿಂದ ಅಫಘಾತ ಸಂಭವಿಸದೇ ಇದ್ದರೂ ಸಹ ಆತನ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ವಿಚಾರಗಳಾವುವು

ನನಗೆ ಗೊತ್ತಿಲ್ಲದೇ ಇದ್ದರೂ ಸಹ ಆರೋಪಿ ತಪ್ಪಿನಿಂದ ಅಘಘಾತವಾಗಿರುತ್ತದೆ ಎಂದು ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪೋಲೀಸರಿಗೆ ಘಟನಾ ಸ್ಥಳವನ್ನು ನಾನೇ ತೋರಿಸಿದ್ದು, ಚಾಸಾಃ2 ಮತ್ತು 3 ರವರನ್ನು ಪೋಲೀಸಿನವರು ಕರೆದುಕೊಂಡು ಬಂದಿರುತ್ತಾರೆ. ಘಟನಾ ಸ್ಥಳದ ಚಕ್ಕುಬಂಧಿ ಪಶ್ಚಿಮಕ್ಕೆ ಜಮೀನು, ಪೂರ್ವಕ್ಕೆ ಉಪ್ಪರಿಗೇನಹಳ್ಳಿ, ಉತ್ತರಕ್ಕೆ ಹಾಲೇನಹಳ್ಳಿ, ದಕ್ಷಿಣಕ್ಕೆ ಹೆಚ್.ಡಿ.ಪುರ ಗ್ರಾಮ ಇದೆ.

ನನ್ನ ಮುಖ್ಯವಿಚಾರಣೆಯಲ್ಲಿ ತಿಳಿಸಿದ ಸಂಗತಿಗಳು ಎಲ್ಲಾ ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ, ನಾನು ಇದೇ ಮೊದಲ ಬಾರಿ ಆರೋಪಿಯನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ :**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ